ಮಳೆ ನೀರು ನದಿಗೆ ಹರಿದು ಬಿಡುವ ಬಗ್ಗೆ ಕ್ರಮ

1194 (1339) ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ಕ್ಷೇತ್ರಕ್ಕೆ ಸೇರಿದ ಪಾಪಾಗ್ನಿ ನದಿ ಚಿಂತಾಮಣಿ ಮತಕ್ಷೇತ್ರದಲ್ಲಿ ಸುಮಾರು 38 ಕಿ.ಮೀ. ಉದ್ದ ಹರಿದು ಆಂಧ್ರ ಪ್ರದೇಶಕ್ಕೆ ಸೇರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಕೋಲಾರ ಜಿಲ್ಲೆಯಲ್ಲಿ ಅತಿ ವಿರಳವಾಗಿ ಬೀಳುವ ಮಳೆಯಿಂದ ಬಂದ ನೀರನ್ನು ಹರಿಯುವ ನದಿಗಳಿಗೆ ಅಡ್ಡಲಾಗಿ ಪಕಪ್‌ಗಳನ್ನು ಕಟ್ಟಿ ಹರಿಯುವ ನೀರನ್ನು ನಿಲ್ಲಿಸಿ ಆ ಪ್ರದೇಶಗಳಲ್ಲಿ ಜಲಸಂಪತ್ತು ವೃದ್ಧಿಯಾಗಲು ಮತ್ತು ನೀರು ಆ ಪ್ರದೇಶಕ್ಕೆ ಏನು ಉಪಯೋಗವಿಲ್ಲದೆ ಆಂಧ್ರ ಕಡೆ ಹೋಗುವುದನ್ನು ನಿಲ್ಲಿಸಲು ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ಬಂದಿದೆ.

ಆ) ಪಾಪಾಗ್ನಿ ನದಿಗೆ ಅಡ್ಡಲಾಗಿ ಚಿಂತಾಮಣಿ ತಾಲ್ಲೂಕಿನಲ್ಲಿ (1) ರಾಚಾನು ಒಡ್ಡು 2) ಬಸವಾಪುರದ ಬಳಿ ಗುಬ್ಬಿ ನಾಯ ಒಡ್ಡುಗಳನ್ನು ನಿರ್ಮಿಸಿ ಕಾಲುವೆಗಳ ಮುಖೇನ ವ್ಯವಸಾಯಕ್ಕೆ ನೀರೊದಿಗಿಸಲಾಗುತ್ತದೆ. ಹರಿಯುವ ನೀರನ್ನು ನಿಲ್ಲಿಸಿ ಜಲಸಂಪತ್ತನ್ನು ವೃದ್ಧಿಪಡಿಸುವ ವಿಶೇಷ ಯೋಜನೆಯನ್ನು ಹಮ್ಮಿಕೊಳ್ಳಲು ಉದ್ದೇಶವಿದ್ದು ಇದಕ್ಕಾಗಿ ಜಿಲ್ಲೆಯಲ್ಲಿ ಸಾಧ್ಯವಿದ್ದ ಎಲ್ಲಾ ಸ್ಥಳಗಳಲ್ಲಿ ಅಣೆಕಟ್ಟುಗಳನ್ನು (ಪಿಕಪ್‌ಗಳು) ಅಥವಾ ಭೂಗತ ತಡೆಗೋಡೆಗಳ (ಡೈಕ್) ನ್ನು ನಿರ್ಮಿಸಲುಯೋಜನೆಯನ್ನು ರೂಪಿಸಲಾಗುತ್ತಿದೆ. ಯೋಜನೆಯ ತಾಂತ್ರಿಕ ಮತ್ತು ಆರ್ಥಿಕ ಶಕ್ಯತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಅಥಣಿ ತಾಲ್ಲೂಕಿನಲ್ಲಿ ಸಿ ಎಲ್ -2 , ಸಿ ಎಲ್-9 ಹೊಸ ಲೈಸನ್ಸ್ ಬಗ್ಗೆ

1198(1433) ಶ್ರೀ ಡೊಂಗರಗಾಂವ್ ಶಹಜಹಾನ್ ಇಸ್ಮಾಯಿಲ್ : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಅಥಣಿ ತಾಲ್ಲೂಕಿನಲ್ಲಿ ಸಿ ಎಲ್-2 ಸಿ ಎಲ್-9 ಹೊಸ ಲೈಸೆನ್ಸ್‌ಗಳಿಗಾಗಿ ಎಷ್ಟು ಪ್ರಕರಣಗಳು (ಅರ್ಜಿ) ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ?

2) ಇದು ಯಾವ ಹಂತದಲ್ಲಿದೆ, ವಿವರಣೆ ನೀಡುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿ)

1) ಅಥಣಿ ತಾಲ್ಲೂಕಿನ ಹೊಸ ಸಿ ಎಲ್-2 ಸನ್ನದಿಗಾಗಿ - 1 (ಒಂದು) ಅರ್ಜಿ ಹಾಗೂ ಹೊಸ ಸಿ ಎಲ್-9 ಸನ್ನದಿಗಾಗಿ 3 ಅರ್ಜಿಗಳು ಸ್ವೀಕೃತವಾಗಿದೆ.

2) ಹೊಸ ಸಿ ಎಲ್-2 ಮತ್ತು ಸಿ ಎಲ್-9 ನನ್ನದುಗಳ ಮಂಜೂರಾತಿಯನ್ನು ನಿಷೇಧಿಸಿರುವುದರಿಂದ ಸದರಿ ಅರ್ಜಿಗಳನ್ನು ತಿರಸ್ಕರಿಸಲಾಗಿದೆ.